ಓ ಎಸ್ ನಂ. 140/2022
ಪಿ ಡಬ್ಲ್ಯೂ 1
ದಿನಾಂಕ 17/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃ ಶ್ರೀ ಎ ಎಸ್ ಎನ್ ಬಿ ವಕೀಲರಿಂದಃ</u>

ಪಾರಮ್ಮ ನನ್ನ ಅಜ್ಜಿ ಎಂದರೆ ಸರಿ. ಸದರಿ ಪಾರಮ್ಮರವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸಾಕ್ಷಿ ಗಂಡು ಮಕ್ಕಳು ಇಲ್ಲ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಮರುಳಮ್ಮರವರು ಪಾರಮ್ಮರವರ ಕಿರಿಯ ಮಗಳಾಗಿರುತ್ತಾರೆ ಮತ್ತು ಗಂಗಮ್ಮರವರು ಹಿರಿಯ ಮಗಳಾಗಿರುತ್ತಾರೆ. ಸರ್ವೆ ನಂ.18 ರ ಆಸ್ತಿಯು ನನ್ನ ತಂದೆ ಪುರದಪ್ಪ ಮತ್ತು ತಾಯಿ ಮರುಳಮ್ಮರವರಿಗೆ ದಾನಪತ್ರದ ಮೂಲಕ ಬಂದಿರುವುದರಿಂದ ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗುವುದಿಲ್ಲ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿಯೇ ಎಂದು ನುಡಿಯುತ್ತಾರೆ. ಸರ್ವೆ ನಂ.22/5 ರ 5 ಎಕರೆ ಜಮೀನು ಮೂಲತಃ ನನ್ನ ಅಜ್ಜ ನಂಜಪ್ಪರವರಿಗೆ ದರ್ಖಾಸ್ತು ಮೂಲಕ ಬಂದ ಆಸ್ತಿ ಎಂದರೆ ಸರಿ. ಸರ್ವೆ ನಂ.224/1 ರ 1 ಎಕರೆ 7 ಗುಂಟೆ ಜಮೀನನ್ನು ನನ್ನ ತಾಯಿ ಮರುಳಮ್ಮರವರು ಸಾದರಹಳ್ಳಿ ಶೇಖರಪ್ಪರವರಿಂದ ದಿನಾಂಕ 05/06/1997 ರಂದು ಕ್ರಯಕ್ಕೆ

ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ.

ನಮ್ಮ ಒಟ್ಟು ಕುಟುಂಬದಲ್ಲಿ ಆದಾಯ ಬರುವಂತಹ ಯಾವ ಆಸ್ತಿಗಳು ಇದ್ದವು ಎಂದರೆ ಸಾಕ್ಷಿ ಎಲ್ಲಾ ಜಮೀನುಗಳು ಸಹ ಮಳೆಯ ಆಶ್ರಿತವಾಗಿದ್ದು ದುಡಿದರೆ ಮಾತ್ರ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ. ನಮ್ಮ ಗ್ರಾಮದ ಸುತ್ತಮುತ್ತ ನೀರಿನ ಹರಿವು ಇಲ್ಲ ಎಂದರೆ ಸಾಕ್ಷಿ ಮೊದಲು ದೇವನೂರು ಕೆರೆ ಕೋಡಿ ಬಿದ್ದು ನಮ್ಮ ಜಮೀನಿನ ಪಕ್ಕದ ಹಳ್ಳಕ್ಕೆ ನೀರು ಬರುತ್ತಿತ್ತು, ಆದರೆ ಇತ್ತೀಚೆಗೆ ಹಳ್ಳಕ್ಕೆ ನೀರು ಬರುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮರುಳಮ್ಮರವರು 1ನೇ ಪ್ರತಿವಾದಿ ಮಲ್ಲೇಶ್ವರವರ ಜತೆ ಮಾತ್ರ ವಾಸ ಇದ್ದರು ಎಂದರೆ ಸಾಕ್ಷಿ ಎಲ್ಲಾ ಮಕ್ಕಳ ಜತೆ ವಾಸ ಇದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ಮರುಳಮ್ಮರವರ ಯೋಗಕ್ಷೇಮವನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರಿಂದ ನನ್ನ ತಾಯಿ 1ನೇ ಪ್ರತಿವಾದಿ ಜತೆ ವಾಸ ಇದ್ದು ಕುಟುಂಬ ಪಡಿತರ ಚೀಟಿಯನ್ನು ಸಹ ಹೊಂದಿದ್ದರು ಎಂದರೆ ಸಾಕ್ಷಿ ನನ್ನ ತಾಯಿ ಮರಳಮ್ಮರವರ ಹೆಸರು 1ನೇ ಪ್ರತಿವಾದಿಯ ಕುಟುಂಬ ಪಡಿತರ ಚೀಟಿಯಲ್ಲಿದ್ದು, ಅವರು 1ನೇ ಪ್ರತಿವಾದಿ ಜತೆ ಸಹ ಇದ್ದರು ಎಂದು ಒಪ್ಪಿಕೊಳ್ಳುತ್ತಾರೆ. 1ನೇ ಪ್ರತಿವಾದಿ ನನ್ನ ತಾಯಿ ಮರುಳಮ್ಮರವರನ್ನು ಅವರ ಕೊನೆಗಾಲದವರೆಗೆ ಚೆನ್ನಾಗಿ

ನೋಡಿಕೊಳ್ಳುತ್ತಿದ್ದ ಕಾರಣ ನನ್ನ ತಾಯಿ ದಿನಾಂಕ 10/01/2019 ರಂದು ಸರ್ವೆ ನಂ.18, 22/5 ಮತ್ತು 50/4 ರ ಆಸ್ತಿಗಳನ್ನು 1 ನೇ ಪ್ರತಿವಾದಿ ಹೆಸರಿಗೆ ವಿಲ್ ನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ತಾಯಿ ಮರುಳಮ್ಮರವರು ಮರಣ ಹೊಂದಿದ ನಂತರ ಎಂದು ನುಡಿಯುತ್ತಾರೆ. ನನ್ನ ತಾಯಿ ಮರುಳಮ್ಮರವರು ದಿನಾಂಕ 07/08/2021 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಪುರದಪ್ಪರವರು ದಿನಾಂಕ 06/01/1971 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸರ್ವೆ ನಂ.18 ರಲ್ಲಿ 25 ಗುಂಟೆ ಜಮೀನನ್ನು ಸರ್ಕಾರದವರು ಭದ್ರಾ ಮೇಲ್ದಂಡೆ ಯೋಜನೆಗೆ  ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಭೂ ಸ್ವಾಧೀನವಾದ ಜಮೀನಿನ ಬಾಬ್ತು ಸರ್ಕಾರದವರು ಪರಿಹಾರವಾಗಿ 93,73,064/- ರೂಗಳನ್ನು ಘೋಷಣೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಮರುಳಮ್ಮರವರು ಮಾಡಿರುವಂತಹ ವಿಲ್ ನಾಮೆಯಲ್ಲಿ ಸರ್ವೆ ನಂ.18 ರ 7 ಎಕರೆ 27 ಗುಂಟೆ ಪೈಕಿ 1 ನೇ ಪ್ರತಿವಾದಿ ಹಿಸ್ಸೆಗೆ ಬಂದಿರುವ 3 ಎಕರೆ 27 ಗುಂಟೆ ಜಮೀನಿನಲ್ಲಿ 25 ಗುಂಟೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸಾಕ್ಷಿ ಮುಂದುವರೆದು ನನ್ನ ಜಮೀನು ಮತ್ತು ಬೇರೆಯವರ ಜಮೀನು ಸಹ ಹೋಗಿದೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಜಮೀನು ಭೂ ಸ್ವಾಧೀನಗೊಂಡಿದೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿರುವುದರಿಂದ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. 25 ಗುಂಟೆ ಜಮೀನನ್ನು ಯಾವಾಗ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿ ನನ್ನ ತಾಯಿ ಬದುಕಿದ್ದ ಸಮಯದಲ್ಲೇ ಅಳತೆ ಮಾಡಿಕೊಂಡು ಹೋಗಿದ್ದು, ನನ್ನ ತಾಯಿ ಮರಣ ಹೊಂದಿದ ನಂತರ ಭೂ ಸ್ವಾಧೀನ ಪ್ರಕ್ರಿಯೆ ನಡೆದಿರುತ್ತದೆ ಎಂದು ನುಡಿಯುತ್ತಾರೆ. ವಿಲ್ ನಾಮೆಯ ಆಧಾರದಲ್ಲಿ ನನ್ನ ತಾಯಿ ಸರ್ವೆ ನಂ.18 ರ 7 ಎಕರೆ 27 ಗುಂಟೆ ಪೈಕಿ 3 ಎಕರೆ 27 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ವಿಲ್ ನಾಮೆ ಬರೆದು ಆ ಜಮೀನನ್ನು 1 ನೇ ಪ್ರತಿವಾದಿ ಅನುಭವಿಸಿಕೊಂಡು ಹೋಗುವಂತೆ ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ.18 ರಲ್ಲಿ ನನ್ನ ತಾಯಿ ನನಗೆ ಎಷ್ಟು ಜಮೀನು ಕೊಟ್ಟಿದ್ದರು ಎಂದರೆ ಸಾಕ್ಷಿ ನಾವು ಮೂರು ಜನ ಸಹೋದರರು ಜೀವನಕ್ಕಾಗಿ ಒಂದೊಂದು ಪಟ್ಟೆ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದೇವು ಎಂದು ನುಡಿಯುತ್ತಾರೆ. ಒಂದು ಪಟ್ಟೆ ಎಂದರೆ ಸುಮಾರು 2 ರಿಂದ ಎರಡೂವರೆ ಎಕರೆ ಇರಬಹುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಅನುಭವಿಸುತ್ತಿದ್ದ ಒಂದು ಪಟ್ಟೆ

ಜಮೀನಿನಲ್ಲಿ ತೆಂಗಿನ ಮರಗಳು ಎಷ್ಟು ಇದ್ದವು ಎಂದರೆ ಸಾಕ್ಷಿ ಸುಮಾರು **70-80** ಮರಗಳು ಇರಬಹುದು, ಎಲ್ಲಾ ಬಿದ್ದು ಹೋಗಿವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.